# ಪಾಮರ ಪಂಡಿತನಾದದ್ದು



ಅಕ್ಬರನ ಸಾಮ್ರಾಜ್ಯದಲ್ಲಿ ನಾಗಶರ್ಮ ಎಂಬುವವನಿದ್ದ. ವೇದಾಧ್ಯಯನ ಮಾಡಿರದ ಅವನು ಪಾಂಡಿತ್ಯದಲ್ಲಿ ತುಂಬಾ ಹಿಂದುಳಿದಿದ್ದ. ಆದರೂ ಅವನಿಗೊಂದು ಬಯಕೆ. ಹೇಗಾದರೂ ಮಾಡಿ ತಾನು ಎಲ್ಲರ ಬಾಯಿಯಲ್ಲಿಯೂ ಪಂಡಿತ ಎನಿಸಿಕೊಳ್ಳಬೇಕು ಎಂದು.

ಇದಕ್ಕೊಂದೇ ಉಪಾಯ. ಜಾಣರ ಜಾಣ ಬೀರಬಲ್‌ನ ಮೊರೆ ಹೋಗುವುದು. ಅಂತೆಯೇ ಬೀರಬಲ್‌ನನ್ನು ಭೇಟಿಯಾಗಿ ತನ್ನ ಮನದ ಇಂಗಿತ ಅರುಹಿದ. ತನಗೇನೂ ಜ್ಞಾನವಿಲ್ಲ, ಆದರೂ ತಾನು ಪಂಡಿತನೆನಿಸಿಕೊಳ್ಳಬೇಕು ಎಂದು ವಿಜ್ಞಾಪಿಸಿಕೊಂಡ.

ಬೀರಬಲ್ ನಾಗಶರ್ಮನಿಗೆ ಒಂದು ಉಪಾಯ ಹೇಳಿಕೊಟ್ಟ. 'ಇಂದಿನಿಂದ ಯಾರಾದರೂ ನಿನಗೆ ಪಂಡಿತ ಎಂದು ಕರೆದರೆ ಕೋಪ ಬಂದಂತೆ ನಟಿಸಿ. ಅವರ ಕಡೆಗೆ ಕಲ್ಲು ತೂರು. ಮುಂದೆ ನೋಡು ಅದರ ಪರಿಣಾಮ. 15 ದಿನಗಳ ನಂತರ ಪಂಡಿತ ಎಂದರೆ ಸುಮ್ಮನಿದ್ದು ಬಿಡು' ಎಂದ. ನಾಗಶರ್ಮನಿಗೆ ಅಚ್ಚರಿಯಾದರೂ ತೋರ್ಪಡಿಸಿಕೊಳ್ಳದೇ ಅವನ ಮಾತಿಗೆ ತಲೆಯಾಡಿಸಿ ಹೊರಟ. ಅವನು ಹೊರ ಹೋದ ನಂತರ ಅವನನ್ನೇ ಹಿಂಬಾಲಿಸಿದ ಬೀರಬಲ್ ಅಲ್ಲಿಯೇ ಮನೆಯೊಂದರ ಮುಂದೆ ಆಡುತ್ತಿದ್ದ ನಾಲ್ಕೈದು ಜನ ಬಾಲಕರನ್ನು ಕರೆದು 'ಅದೋ, ಅಲ್ಲಿ ಹೋಗುತ್ತಿರುವ ಬ್ರಾಹ್ಮಣನಿಗೆ ಪಂಡಿತ, ಪಂಡಿತ ಎಂದು ಕೂಗಿ ರೇಗಿಸಿ ಮಜಾ ಇರುತ್ತೆ' ಎಂದು ಹೇಳಿದ. ಅದರಂತೆ ಆ ಬಾಲಕರು ಪಂಡಿತ, ಪಂಡಿತ ಎಂದು ಕೇಕೆ ಹಾಕುತ್ತ ನಾಗಶರ್ಮನನ್ನು ಹಿಂಬಾಲಿಸತೊಡಗಿದರು.

ನಾಗಶರ್ಮನಿಗೆ ಅಚ್ಚರಿ. ಬೀರಬಲ್ ಹೇಳಿಕೊಟ್ಟಂತೆ ಕೋಪ ಬಂದವರಂತೆ ನಟಿಸಿ ಪಕ್ಕದಲ್ಲಿ ಬಿದ್ದಿದ್ದ ಕಲ್ಲುಗಳನ್ನು ಆ ಬಾಲಕರ ಕಡೆಗೆ ಬೀಸಿ ಒಗೆದ. ಸ್ವಲ್ಪ ದೂರ ಸಾಗಿದ ನಂತರ ಆ ಬಾಲಕರು ಮತ್ತೆ ಕೂಗುತ್ತಾ ಹಿಂಬಾಲಿಸಿದರು. ಮತ್ತೆ ಕಲ್ಲು ತೂರಿದ. ಮರುದಿನವೂ ಆ ಬಾಲಕರು ಇವನು ಬರುವುದನ್ನೇ ಕಾದು ಕುಳಿತು ಛೇಡಿಸತೊಡಗಿದರು. ಇವನು ಕಲ್ಲು ಬೀಸುತ್ತಿದ್ದ. ಇದು ನಿತ್ಯ ಕಾಯಕವಾಗಿಬಿಟ್ಟಿತ್ತು. 15ನೇ ದಿನ ಬೀರಬಲ್ ಹೇಳಿದ್ದಂತೆ ರೇಗುವುದನ್ನು ಬಿಟ್ಟುಬಿಟ್ಟ ಹುಡುಗರು ರೇಗಿಸಿದರೂ ನಗುತ್ತಾ ಸಾಗುತ್ತಿದ್ದ. ಅಷ್ಟರಲ್ಲಾಗಲೇ ಹುಡುಗರು ಪಂಡಿತ ಎಂದು ರೇಗಿಸುವುದನ್ನು ದಿನಾಲೂ ನೋಡಿದ್ದ ದೊಡ್ಡವರು, ಗೆಳೆಯರು ಕೂಡ 'ಏನು ಪಂಡಿತರೇ ಕುಶಲವೇ?' ಎನ್ನತೊಡಗಿದರು. ಮನೆಯಲ್ಲಿಯೂ 'ಪಂಡಿತ ಕಾಫಿ ಕುಡಿ, ಪಂಡಿತ ಊಟಕ್ಕೆ ಬಾ' ಎಂದು ಸಂಬೋಧಿಸಲಾರಂಭಿಸಿದರು.

ನಾಗಶರ್ಮನಿಗೆ ಆನಂದವೋ ಆನಂದ. ಎಲ್ಲರೂ ತನ್ನನ್ನು ಪಂಡಿತ ಎಂದೇ ಕರೆಯುತ್ತಿದ್ದಾರೆ. ಬೀರಬಲ್ ಹೇಳಿದ್ದು ನಿಜ. ತಾನೀಗ ಪಂಡಿತ ಎಂದು ಪುಳಕಿತನಾದ.

(ಸಂಗ್ರಹ)

**- ಕೆ.ಶ್ರೀನಿವಾಸರಾವ್,**
**ಹರಪನಹಳ್ಳಿ**

# ಬೆಳೆಯುವ ಬನ್ನಿ



ಬೆಳೆಯುವ ಬನ್ನಿ ಮನೆಯಂಗಳದಿ
ಹೂ– ಹಣ್ಣು ತರಕಾರಿ ಕೈತೋಟವೊಂದ

ಮೂಲಿ ಬೆಂಡೆ ಹೀರೆ ದಂಟು ಬದನೆ
ಆಲೂ ಅವರೆ ಸಿಹಿಬೂದುಗುಂಬಳ
ದೊಡ್ಡಮೆಣಸಿನಕಾಯಿ ಪಡುವಲ ಸೌತೆ
ನವಿಲು ಹೂಕೋಸು ನಡುವೆ ಬನಸೌತೆ

ಈರುಳ್ಳಿ ನಿಂಬೆ ಹಸಿಮೆಣಸಿನಕಾಯಿ
ಹಸಿರು ಕೊತ್ತಂಬರಿ ಕರಿಬೇವು ಸೊಪ್ಪು
ಇರಲಿ ಮಧ್ಯೆ ತುಳಸಿ ಸುತ್ತೆಲ್ಲ ತುಂಬೆ
ದೊಡ್ಡಪತ್ರೆ ಜೊತೆ ಶುಂಠಿ ಗಜನಿಂಬೆ

ಘಮ್ಮೆಂದು ಬಿರಿದು ಸುಗಂಧ ಬೀರುವ
ಮಲ್ಲಿಗೆಯೊಡನಿರಲಿ ಜಾಜಿ ಗುಲಾಬಿ
ದಾಸವಾಳದ ಬಳಿ ಸುಗಂಧರಾಜ
ಕನಕಾಂಬರಕ್ಕೆ ಸೇವಂತಿ ಸ್ನೇಹ

ಮಾವು ಕಿತ್ತಳೆ ನೇರಲೆ ಸೇಬು
ಮೂಸಂಬಿ ಜೊತೆಗೆ ಪೇರಲೆ ಸಾಲು
ಹಲಸು ತೆಂಗು ಬಾಳೆ ಬೇವು
ಮನೆಯಂಗಳದಿ ಬೆಳೆಯುವ ನಾವು

**-ಮತ್ತೂರು ಸುಬ್ಬಣ್ಣ**